# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ 4116/2023

ಸಿ.ಡಬ್ಲ್ಯೂ- 9
ಪಿ.ಡಬ್ಲ್ಯೂ- 4

**ದಿನಾಂಕಃ 28-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಲಕಾರಿಸಿದ್ದ ಬಿರಾದಾರ |
| ತಂದೆಯ/ಗಂಡನ ಹೆಸರು | : | ಸೋಮನಿಂಗ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಮೋಟಾರ ವಾಹನ ನಿರೀಕ್ಷಕರು RTO ಬಾಗಲಕೋಟ |
| ವಾಸ ಸ್ಥಳ | : | ಬಾಗಲಕೋಟ |
| ತಾಲೂಕು | : | ಬಾಗಲಕೋಟ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ನಾನು ಜುಲೈ 2016 ರಿಂದ ಜುಲೈ 2018 ರವರೆಗೆ ಪ್ರಾದೇಶಿಕ ಸಾರಿಗೆ ಕಚೇರಿ ಗೋಕಾಕ ಇಲ್ಲಿ ವಾಹನ ನಿರೀಕ್ಷಕರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30-08-2017 ರಂದು ಪ್ರಸ್ತುತ ಪ್ರಕರಣದ ಅಪಘಾತದಲ್ಲಿ ಭಾಗಿಯಾದ ಅಶೋಕ ಲೇಲ್ಯಾಂಡ ಕಂಪನಿಯ ಗೂಡ್ಸ ಲಾರಿ ನೊಂದಣಿ ನಂ. AP 37 TE 9996 ವಾಹನವನ್ನು IMV ತಪಾಸಣೆಗೆ ಒಳಪಡಿಸುವಂತೆ ಚಾಸಾ 14 ರವರು ನಿವೇದನೆ ಸಲ್ಲಿಸಿರುತ್ತಾರೆ. ಅದೇ ದಿನ ಬೆಳಿಗ್ಗೆ 11-15 ಗಂಟೆಗೆ ಘಟಪ್ರಭ ಪೊಲಿಸ ಠಾಣಾ ಆವರಣಕ್ಕೆ ಭೇಟಿ ನೀಡಿ ಲಾರಿಯನ್ನು IMV ತಪಾಸಣೆಗೆ ಒಳಪಡಿಸಿರುತ್ತೇನೆ ಮತ್ತು ತಪಾಸಣೆಯ ಸಮಯದಲ್ಲಿ ಯಾವುದೇ ಹೊಸ ಜಂಕಗಳು ಕಂಡುಬಂದಿರುವುದಿಲ್ಲ. ವಾಹನವನ್ನು ಚಲಾಯಿಸಿ ನೋಡಲಾಗಿ ವಾಹನದ ಅಡೆತಡೆಗಳು ಸುಸ್ಥಿತಿಯಲ್ಲಿರುವುದು ಕಂಡುಬಂದಿರುತ್ತದೆ. ನನ್ನ ಪ್ರಕಾರ ಪ್ರಸ್ತುತ ಪ್ರಕರಣದಲ್ಲಿ ಹೇಳಿರುವ ಅಪಘಾತವು ವಾಹನದ ಯಾಂತ್ರಿಕ ದೋಷದಿಂದ ಉಂಟಾಗಿರುವುದಿಲ್ಲ. ಅದೇ ದಿನ ನಾನು ತನಿಖಾಧಿಕಾರಿಗೆ IMV ವರದಿಯನ್ನು ಸಲ್ಲಿಸಿರುತ್ತೇನೆ. IMV ವರದಿಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ Sri. SLP ವಕೀಲರಿಂದಃ**

ನಾನು ಲಾರಿಯನ್ನು ಅದೇ ದಿನ ಬೆಳಿಗ್ಗೆ 11-15 ಗಂಟೆಗೆ ಘಟಪ್ರಭ ಪೊಲಿಸ ಠಾಣಾ ಆವರಣದಲ್ಲಿ ತಪಾಸಣೆ ಮಾಡಿರುತ್ತೇನೆ. ತನಿಖಾಧಿಕಾರಿ ಮಾತು ಕೇಳಿಕೊಂಡು ನಿಪಿ-5 ನ್ನು ಪ್ರಕರಣಕ್ಕಾಗಿ ಖೊಟ್ಟಿಯಾಗಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಘಟಪ್ರಭ ಠಾಣಾ

ಸಿ.ಡಬ್ಲ್ಯೂ- 9
ಪಿ.ಡಬ್ಲ್ಯೂ- 4

ಆವರಣಕ್ಕೆ ಭೇಟಿ ನೀಡಿರುವುದಿಲ್ಲ, ವಾಹನವನ್ನು IMV ತಪಾಸಣೆಗೆ ಒಳಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾಹನದ ಭಾವಚಿತ್ರಗಳ ಆಧಾರದ ಮೇಲೆ IMV ವರದಿಯನ್ನು ನನ್ನ ಕಚೇರಿಯಲ್ಲಿ ತಯಾರಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.